**ಸಾಕ್ಷಿಯನ್ನು ದಿಃ 30.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ.ಟಿ. ವಕೀಲರಿಂದಃ**

2005ನೇ ಇಸವಿಯಿಂದ ನಾನು ವಿಶಾಲ್ ಗಾರ್ಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೇನು. ಆರೋಪಿತರು ಮತ್ತು ನಾನು ಒಂದೇ ಗಾರ್ಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದರಿಂದ ಪರಿಚಯವಿದ್ದರು. 1ನೇ ಆರೋಪಿ ಕಟ್ಟಿಂಗ್ ಮಾಸ್ಟರ್ ಆಗಿದ್ದರು. 2ನೇ ಆರೋಪಿ ಸ್ವಲ್ಪ ದಿನ ಅಲ್ಲಿ ಕೆಲಸ ಮಾಡಿ ಯಾವುದೋ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿದಾಗ ಹೋಗಿದ್ದಾರೆ. 3ನೇ ಆರೋಪಿ ನಮ್ಮ ಜೊತೆ ಎಲ್ಲಾ ಕೆಲಸ ಮಾಡುತ್ತಿದ್ದರು. 1ನೇ ಆರೋಪಿ ಮನೆಯಲ್ಲಿಯೇ ಚೀಟಿ ವ್ಯವಹಾರ ನಡೆಸುತ್ತಿದ್ದು, ಚೀಟಿ ಹಾಕುವಂತೆ ಹೇಳಿದ್ದರು. 1ನೇ ಆರೋಪಿ ಜನತಾ ಕಾಲೋನಿಯಲ್ಲಿ ಮನೆ ಹೊಂದಿದ್ದರು. 1ನೇ ಆರೋಪಿಯ ಮನೆ ನಂಬರ್

ನೆನಪಿಲ್ಲ. 1ನೇ ಆರೋಪಿ ಧರ್ಮಪುರಿ ತಮಿಳುನಾಡಿನವರು. 3ನೇ ಆರೋಪಿ 1ನೇ ಆರೋಪಿಯ ಮನೆಯ ಪಕ್ಕದಲ್ಲಿ ಮನೆ ಹೊಂದಿದ್ದರು. ನಾನು ವಾರಕ್ಕೆ 3 ರಿಂದ 3.5 ಸಾವಿರ ರೂ ಗಳ ಪೀಸ್ ವರ್ಕ್ ಕೆಲಸ ಮಾಡುತ್ತಿದ್ದೆನು. ಅದಲ್ಲದೇ ನನಗೆ ಒಂದು ಆಟೋ ಇತ್ತು ಹಾಗೂ ಬಟ್ಟೆ ವ್ಯಾಪಾರ ಕೂಡ ಮಾಡುತ್ತಿದ್ದೆನು. ನನಗೆ ಆಟೋ ಮತ್ತು ಬಟ್ಟೆ ವ್ಯಾಪಾರ ಇದ್ದ ಬಗ್ಗೆ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಮತ್ತು ತಮ್ಮ 1ನೇ ಆರೋಪಿಯಲ್ಲಿ ಚೀಟಿ ಹಾಕು ಎಂದು ಹೇಳಿದ್ದರು ಹಾಗಾಗಿ ತಂಗಿ, ತಮ್ಮ ಚೀಟಿ ಹಣ ಕೊಟ್ಟಾಗ  ನನ್ನ, ತಂಗಿ ಮತ್ತು ತಮ್ಮ 03 ಜನರ ಚೀಟಿ ಹಣವನ್ನು ನಾನು ಕಟ್ಟುತ್ತಿದ್ದೆನು. ನಾನು ಲೀಸ್ ಪಡೆದ ಮನೆಯಲ್ಲಿ ವಾಸವಿದ್ದೇನೆ. ನನಗೆ ಮಕ್ಕಳು ಇಲ್ಲ. 1ನೇ ಆರೋಪಿ ಚೀಟಿ ಹಾಕಿಲ್ಲ ಮತ್ತು ಆತನಿಗೆ ಯಾವುದೇ ಹಣ ಕೊಟ್ಟಿಲ್ಲ ಹಾಗೂ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲ ಚೀಟಿಯಲ್ಲಿ 45 ಜನ ಸದಸ್ಯರು ಇದ್ದರು. ಅವರೆಲ್ಲರು ಎಷ್ಟು ಎಷ್ಟು ಚೀಟಿ ಹಾಕಿದರು ಎಂದು ನನಗೆ ಮಾಹಿತಿ ಇಲ್ಲ. ಆ ಎಲ್ಲಾ 45 ಜನರ ವಿಳಾಸ ಗೊತ್ತಿಲ್ಲ, ಆ 45 ಜನರಲ್ಲಿ 4-5 ಜನರ ವಿಳಾಸ ಗೊತ್ತು. 2013ರಲ್ಲಿ ನಾನು 1 ಲಕ್ಷದ 50 ಸಾವಿರ ಚೀಟಿ ಹಾಕಿದ್ದೇ ಎಂದು ಹೇಳಿರುವುದು ಸುಳ್ಳು  ಎಂದರೆ ಸರಿಯಲ್ಲ. ಚೀಟಿ ಮುಕ್ತಾಯಗೊಂಡಿದ್ದರು ಹಣ ಕೊಟ್ಟಿಲ್ಲವೆಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಚೀಟಿ ವ್ಯವಹಾರ ನಡೆಸಲು ಲೈಸನ್ಸ್ ಇದೆಯೇ ಎಂದು ತಿಳಿದುಕೊಂಡಿದ್ದೆನು. ಆ ಲೈಸನ್ಸ್ ಇದೆ ಎಂದು ತೋರಿಸಲು ನಮ್ಮ ಕಡೆಯಿಂದ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿತರು ಮನೆ ಖಾಲಿ ಮಾಡಿಕೊಂಡು ಹೋಗಿಲ್ಲ ಅದೇ ಸ್ಥಳದಲ್ಲಿ ಇದ್ದರು ಎಂದರೆ ಸರಿಯಲ್ಲ.  ಈ ಘಟನೆಗೆ ಸಂಬಂಧಿಸಿ ಪೊಲೀಸರಿಗೆ ದೂರು ನೀಡಿದ್ದೇನೆ. ಮೊದಲ ಬಾರಿ ನಾನು ದೂರು ಕೊಟ್ಟಾಗ ಪೊಲೀಸರು ಅದನ್ನು ಸ್ವೀಕರಿಸಲಿಲ್ಲ. ಆ ನಂತರ ನ್ಯಾಯಾಲಯಕ್ಕೆ ಖಾಸಗಿ ದೂರನ್ನು ದಾಖಲಿಸಿದ್ದೇನೆ. ಮೊದಲ ಬಾರಿಗೆ ಪೊಲೀಸರಿಗೆ ದೂರು ಕೊಟ್ಟ ಬಗ್ಗೆ ಸ್ವೀಕೃತಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಬ್ದುಲ್ ಎಂಬ ಮಂಡಿಪೇಟೆ ವಕೀಲರ ಮೂಲಕ ನ್ಯಾಯಾಲಯಕ್ಕೆ ಖಾಸಗಿ ದೂರನ್ನು ದಾಖಲಿಸಿದ್ದೇನೆ. ಸಾಕ್ಷಿ ಮುಂದುವರೆದು ಅಷ್ಟಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಹೇಳಿಕೆ ತೆಗೆದುಕೊಂಡಿದ್ದಾರೆ. ನನ್ನ 2018 ರಲ್ಲಿ ಪೊಲೀಸರು ಹೇಳಿಕೆ ಪಡೆದುಕೊಂಡಿದ್ದಾರೆ. ನನ್ನ ಹೇಳಿಕೆಯನ್ನು ಪಡೆದುಕೊಂಡ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಚೀಟಿ ಹಣ ಕಟ್ಟಿದ ಬಗ್ಗೆ ಎಂಟ್ರಿ ಮಾಡಿದ ಬುಕ್ ಅನ್ನು ಕೊಟ್ಟಿದ್ದಾರೆ. ನಿಪಿ-3 ದಾಖಲೆಯನ್ನು ನಾನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನಗೆ ಕನ್ನಡ ಅರ್ದ ಬರ್ದ ಮಾತ್ರ ಬರೆಯಲು ಗೊತ್ತು ನಿಪಿ-3 ರ ಒಕ್ಕಣೆಯನ್ನು 1ನೇ ಆರೋಪಿ ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಪಿ-3 ಅನ್ನು ಪೊಲೀಸ್ ಠಾಣೆಗೆ ಕೊಟ್ಟಿದ್ದೇನೆ. ನಿಪಿ-3 ಅನ್ನು ಪೊಲೀಸರಿಗೆ ಕೊಡುವಾಗ ಶಂಕರಪ್ಪ ಎಂಬುವವರನ್ನು ಸಾಕ್ಷಿದಾರರನ್ನಾಗಿ ಕರೆಸಿದ್ದರು. ಶಂಕರಪ್ಪ ರವರು ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮದ್ಯಾಹ್ನ ಸಮಯ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಪೊಲೀಸ್ ಠಾಣೆಗೆ ಹೋದ ಸಮಯ ನಿಖರವಾಗಿ ಗೊತ್ತಿಲ್ಲ. ನಿಪಿ-1 ರಲ್ಲಿರುವ ನನ್ನ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ನಿಪಿ-1 ರ ಒಕ್ಕಣೆಯನ್ನು ಓದಿ ಹೇಳಿದ್ದು ಆ ನಂತರ ನಾನು ಸಹಿ ಮಾಡಿದ್ದೇನೆ. ನಿಪಿ-1 ಕ್ಕೆ ಸಹಿ ಮಾಡಿದ ಸಮಯ ಗೊತ್ತಿಲ್ಲ. ಹಿಂದೆ ನಾನು ಒಂದು ಚೀಟಿ ವ್ಯವಹಾರ ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರಲ್ಲಿ ಚೀಟಿ ಹಾಕಿಲ್ಲ, ಆರೋಪಿತರು ಹಣ ಕೊಡಬೇಕಾಗಿಲ್ಲ ಮತ್ತು ಆರೋಪಿತರು ಯಾವುದೇ ಚೀಟಿ ವ್ಯವಹಾರ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**